ನಾಲ್ಕು ದಿನಗಳಿರುವಾಗ ಟೀವಿಗಳಲ್ಲಿ, ಪತ್ರಿಕೆಗಳಲ್ಲಿ ಮುಖ್ಯಮಂತ್ರಿ 'ಗ್ರಾಮ ಸಾಂತ್ವನ' ಕಾರ್ಯಕ್ರಮಕ್ಕಾಗಿ ಹೊಸಳ್ಳಿಗೆ ಬರುವ ಸುದ್ದಿಗಳು ಬಿತ್ತರವಾದವು. ಟೀವಿ ಚಾನಲೊಂದು ಹೊಸಳ್ಳಿಯ ಸ್ವಾತಂತ್ರ್ಯ ಯೋಧರ ಕುರಿತು ಒಂದು ಗಂಟೆಯ ಕಾರ್ಯಕ್ರಮ ಪ್ರಸಾರ ಮಾಡಿತು! ನಲವತ್ತೆರಡರ ಚಳವಳಿಯಲ್ಲಿ ಊರಿನ ಮೂವತ್ತು ಸ್ವಾತಂತ್ರ್ಯ ಯೋಧರು ಜೈಲಿಗೆ ಹೋಗಿದ್ದರೆಂಬ ಸಂಗತಿ ಕುರಿತದ್ದು. ಈ ಕಾರ್ಯಕ್ರಮ ಒಂದೇ ದಿನ ಎರಡು ಸಲ ಪ್ರಸಾರವಾಯಿತು. ಕಾರ್ಯಕ್ರಮ ನಡೆಸಿಕೊಟ್ಟ ಯುವತಿ ಇಂಥದೊಂದು ಊರು ಇದೆ ಎನ್ನುವುದೇ ನಮ್ಮ ರಾಜ್ಯಕ್ಕೆ ಹೆಮ್ಮೆಯ ಸಂಗತಿ ಎಂದು ಹಲವು ಸಲ ಹೇಳಿದಳು. ಊರ ಜನರೆಲ್ಲ ಕಾರ್ಯಕ್ರಮ ನೋಡಿದರು. ಊರಿನ ಕೆಲ ಮನೆಗಳ ಗೋಡೆಗಳನ್ನು ಅಲಂಕರಿಸಿದ್ದ ದಿವಂಗತ ಸ್ವಾತಂತ್ರ್ಯ ಯೋಧರು ಟೀವಿಯಲ್ಲಿ ಕಾಣಿಸಿದರು. ಚಳವಳಿ ದಿನಮಾನಗಳಲ್ಲಿ ಅವರ ಹೆಸರುಗಳು ಅಕ್ಕಪಕ್ಕದ ಊರವರಿಗೂ ಗೊತ್ತಿರಲಿಲ್ಲವಂತೆ! ಅವರ ಹೋರಾಟ ಸಾರ್ಥಕವಾಯಿತೆಂದು ಊರ ಜನ ಹೆಮ್ಮೆ ಪಟ್ಟುಕೊಂಡರು. ಮುಖ್ಯಮಂತ್ರಿಗಳು ಊರಲ್ಲಿರುವ ತನಕವೂ ಇಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳನ್ನೆಲ್ಲ ಟೀವಿಯಲ್ಲಿ ತೋರಿಸುತ್ತಾರೆ. ನಾವೂ ಟೀವಿಗಳಲ್ಲಿ ಕಾಣಿಸುತ್ತೇವೆ ಎಂದು ಕೆಲವರು ಖುಷಿ ಖುಷಿಯಾಗಿ ಹೇಳಿಕೊಂಡು ಓಡಾಡಿದರು.

ಮುಖ್ಯಮಂತ್ರಿಗಳು ಮಧ್ಯಾಹ್ನ ಎರಡು ಗಂಟೆ ಹೊತ್ತಿಗೆ ಹೆಲಿಕಾಪ್ಟರ್‌ನಲ್ಲಿ ಬರುತ್ತಾರಂತೆ ಎಂಬ ಸುದ್ದಿ ಬಂದ ಬೆನ್ನಲ್ಲೇ ಹೈಸ್ಕೂಲು ಮೈದಾನದಲ್ಲೇ ಹೆಲಿಕಾಪ್ಟರ್ ಇಳಿಸಲು ಬೇಕಾದ ಸಿದ್ಧತೆಗಳು ಆರಂಭವಾದವು.

'ಮೊದಲು ಜನತಾ ದರ್ಶನ. ಅಲ್ಲೇ ಪರ ಊರುಗಳ ಜನರ, ಸಂಘ ಸಂಸ್ಥೆಗಳ ಅಹವಾಲುಗಳನ್ನು ಮುಖ್ಯಮಂತ್ರಿ ಕೇಳಿಸಿಕೊಳ್ಳುತ್ತಾರೆ. ಆಮೇಲೆ ಅಧಿಕಾರಿಗಳ ಜತೆ ಮೀಟಿಂಗು. ಆನಂತರ ಜಿಲ್ಲೆಯ ಎಮ್ಮೆಲ್ಲೆಗಳ ಜತೆ ಸಭೆ. ಆ ಮೇಲೆ ಪತ್ರಿಕಾಗೋಷ್ಠಿ. ಅದು ಮುಗಿದ ಮೇಲೆ ಟೈಂ ಸಿಕ್ಕರೆ ಸೂಗೂರು ಮಠದ ಗೋಶಾಲೆ ನೋಡಲು ಕಾರಿನಲ್ಲಿ ಹೋಗಿ ಬರುತ್ತಾರಂತೆ. ಆ ಮೇಲೆ ವಜ್ರ ಮಹೋತ್ಸವ ಕಾರ್ಯಕ್ರಮ. ಆ ಮೇಲೆ ಮುಖ್ಯಮಂತ್ರಿಗಳ ಊಟ. ಊಟ ಆದ ಮೇಲೆ ಒಂದು ಗಂಟೆ ಹೊಸಳ್ಳಿ ಜನರ ಜತೆ ಮಾತುಕತೆ ಅಂತ ನಿಗದಿ ಮಾಡಿದ್ದಾರೆ' ಎಂದು ಸ್ವಾಗತ ಸಮಿತಿಯ ಅಧ್ಯಕ್ಷರಾದ ಶಾಸಕರು ಹೇಳಿದ್ದನ್ನೆಲ್ಲ ಕೇಳಿ ಊರವರಿಗೆ ನಿರಾಸೆಯಾಯಿತು.

'ನಮ್ಮವರ ಹೆಣಗಳನ್ನು ದಫನು ಮಾಡಲು ಊರಲ್ಲಿ ಜಾಗವೇ ಇಲ್ಲ. ದೇವರ ಹಳ್ಳದಲ್ಲಿ ದಫನು ಮಾಡಲು ಊರವರು ಬಿಡ್ತಾ ಇಲ್ಲ... ನಮ್ಮ ಸ್ಮಶಾನಕ್ಕೆಂತ ಸ್ವಲ್ಪ ಭೂಮಿ ಕೊಡಿ ಅಂತ ಸರ್ಕಾರಕ್ಕೆ ಹತ್ತಾರು ಅರ್ಜಿ ಬರೆದು ಸಾಕಾಗಿದೆ. ಈಗ ಮುಖ್ಯಮಂತ್ರಿ ಊರಿಗೆ ಬರ್ತಾರಲ್ಲ... ಅವರನ್ನೇ ಭೂಮಿ ಕೊಡಿ ಅಂತ ಕೇಳ್ತೀವಿ... ನೀವು ನಮಗೊಂದು ಅರ್ಜಿ ಬರೆದುಕೊಟ್ಟರೆ ಸಾಕು' ಎಂದು ಊರ ಮುಸ್ಲಿಮರ ಪರವಾಗಿ ಹುಸೇನಿ, ಪುರುಷೋತ್ತಮನ ಮನೆಗೆ ಬಂದು ಕೇಳಿಕೊಂಡ. ಅವನ ಜತೆಯಲ್ಲಿ ಇನ್ನೂ ಹಲವರು ಬಂದಿದ್ದರು.

'ಊರಲ್ಲಿ ಸಂತೆ ಆಗಬೇಕು. ಭಾನುವಾರ ಮಿಡ್ಲ್ ಸ್ಕೂಲ್ ಮೈದಾನದಲ್ಲಿ ಸಂತೆ ಸೇರಲು ಅನುಮತಿ ಕೊಡಿಸಿ ಅಂತ ಮುಖ್ಯಮಂತ್ರಿಯವರಿಗೆ ಮನವಿ ಪತ್ರ ಕೊಡಬೇಕು ಅಂತ ಇದೀವಿ. ಒಂದು ಅರ್ಜಿ ಬರೆದು ಕೊಡಿ ಶ್ಯಾನುಭೋಗರೇ' ಎಂದು ಕೆಲವರು ಅವನನ್ನು ಒತ್ತಾಯ ಮಾಡಿದರು.

ಎಲ್ಲರೂ ಮೂರ್ನಾಲ್ಕು ದಿನ ಅವನ ಮನೆಗೆ ಎಡತಾಕಿದರು. 'ಆಯ್ತಪ್ಪ ಎಲ್ಲರಿಗೂ ಅರ್ಜಿ ಬರೆದು ಕೊಡ್ತೀನಿ' ಎಂದು ಪುರುಷೋತ್ತಮ ಹೇಳಿದನೇ ವಿನಾ ಬರೆಯಲು ಅವನಿಗೆ ಪುರುಸೊತ್ತೇ ಆಗಲಿಲ್ಲ.

'ಮುಖ್ಯಮಂತ್ರಿ ಬರೋ ದಿನ ಹೊಸಳ್ಳಿಗೆ ಕನಿಷ್ಠ ಎಂಟ್ಹತ್ತು ಸಾವಿರ ಜನ ಬರಬಹುದು.